ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.

ಸಿಸಿ ನಂಃ **49/2022**

| | | |
|---|---|---|
| ಹೆಸರು | ದೊಡ್ಡವೀರೇಗೌಡ | ಸಿ.ಡಬ್ಲ್ಯೂ **- 11** |
| ತಂದೆಯ ಹೆಸರು | ಹೀರೇಗೌಡ | ಪಿ.ಡಬ್ಲ್ಯೂ **- 9** |
| ವಯಸ್ಸು | 40 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ ಸ್ಥಳ | ಅಮೃತೇಶ್ವರನಹಳ್ಳಿ | |

ಸಾಕ್ಷಿಗೆ ದಿನಾಂಕಃ 11.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಎ ಪಿ ಪಿ ರರಿಂದ ಃ

ಈಗ ನೋಡುತ್ತಿರುವ ದಾಖಲೆಗೆ 2021 ರಲ್ಲಿ ಪೊಲೀಸರ ಕೋರಿಕೆ ಮೇರೆಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಅಮಾನತ್ತು ಮಹಜರ್ ಆಗಿದ್ದು, ಅದನ್ನು ನಿಪಿ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ 9 ಎ ಎಂದು ಗುರುತಿಸಲಾಯಿತು. ನಿಪಿ 9 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈಗ ಫೋಟೋಗಳಲ್ಲಿ ಕಾಣುವ ಕಾರನ್ನು ಈ ಹಿಂದೆ ನೋಡಿರುವುದಿಲ್ಲ.

ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.

ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ

ದಿ: 25.10.2021 ರಂದು ಅಪಘಾತ ಸಂಬಂಧವಾಗಿ ಪೊಲೀಸ್ ಠಾಣಾ ಆವರಣದಲ್ಲಿ ನನ್ನ ಮತ್ತು ಚಾಸಾ 10 ರವರ ಸಮಕ್ಷಮ ಪೊಲೀಸರು ಬೆಳಿಗ್ಗೆ 10 ರಿಂದ 10-45 ರ ಸಮಯದಲ್ಲಿ ಅಮಾನತ್ತು ಪಂಚನಾಮೆಯನ್ನು ಜರುಗಿಸಿ, ಕೆಎ-05-ಜಡ್ -751 ನಂಬರ್‌ನ ಕಾರನ್ನು ಅಮಾನತ್ತು ಪಡಿಸಿಕೊಂಡು ಫೋಟೋಗಳನ್ನು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃಆರೋಪಿ ಪರ: ವಕೀಲರಿಂದ

ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.